ಗೊತ್ತಿರುವುದಿಲ್ಲ, ವಿಷಯ ತಿಳಿದುಕೊಳ್ಳುವುದಕ್ಕೇ ಎರಡು ವರ್ಷ ಬೇಕಾಗುತ್ತದೆ. ಆಂಥಾದ್ದರ ಬಗ್ಗೆ ಜವಾಬ್ದಾರಿಯುತವಾಗಿ ತೀರ್ಮಾನ ತೆಗೆದುಕೊಳ್ಳಬೇಕು. ಮೂರನೆಯ ಪ್ರಶ್ನೆಯಲ್ಲಿ ಎಕ್ಸ್‌ಟೆನ್‌ಷನ್ ಆಫ್ ಸರ್ವೀಸ್ ಬಗ್ಗೆ ಕೇಳಿದ್ದಕ್ಕೆ 'ನಿಲ್' ಎಂದು ಹೇಳಿದ್ದೀರಿ. ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್‌ನಲ್ಲಿ ಮಾನ್ಯ ದಾತಾರ್ ಏನಿದ್ದಾರೆ ಅವರು ನಿವೃತ್ತಿಯಾಗುವ ಹಂತಕ್ಕೆ ಬಂದಿದ್ದಾರೆ. ಅವರಿಗೆ ಮತ್ತೆ ೫ ವರ್ಷ ಎಕ್ಸ್‌ಟೆನ್‌ಷನ್ ಕೊಡತಕ್ಕ ತೀರ್ಮಾನ ಮಾಡಿದ್ದಾರೆಯೇ ? ಕರ್ನಾಟಕ ಸರ್ಕಾರದಿಂದ ನಿಗದಿ ಮಾಡಲ್ಪಟ್ಟ ಈ ಕೆಳಗೆ ತಿಳಿಸಿರುವ ಸಂಭಾವನೆ ಮತ್ತು ಪರತ್ತು ನಿಬಂಧನೆಗಳಿಗೆ ಮೇರೆಗೆ ಮಾರ್ಚ್ ೪, ೧೯೮೭ ರಿಂದ ೫ ವರ್ಷ ಅ ಕಂಪನಿಗೆ ಅಧ್ಯಕ್ಷರು ಮತ್ತು ನಿರ್ದೇಶಕ ಎಂದು ಪುನರ್ನೇಮಕ ಮಾಡಲು ಒಪ್ಪಿಗೆ ಇದೆ ಎಂದು ಆ ಹೇಳಿದ್ದೀರಿ. ಜೊತೆಗೆ ನಮ್ಮ ನಾಯಕಿಯವರು ಹೇಳಿದಹಾಗೆ, ಅಧಿಕಾರಿಗಳನ್ನು ವಿದೇಶಕ್ಕೆ ಕಳಿಸಿ, ಅವರು ಬಂದ ತಕ್ಷಣ ಮತ್ತೆ ಅವರನ್ನು ವರ್ಗಾವಣೆ ಮಾಡಿರತಕ್ಕಂಥಾದ್ದು ಏನಿದೆ ಅದರ ಬಗ್ಗೆ ತಾವು ಹೇಳಬೇಕು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಎಂ.ಸಿ.ಎಫ್. ಸರ್ಕಾರದ ಕಂಪನಿ ಅಲ್ಲ. ಅದು ಜಾಯಿಂಟ್ ಸೆಕ್ಟಾರ್ ಕಂಪನಿ ಕಾನೂನು ಪ್ರಕಾರ ಇರತಕ್ಕಂಥಾದ್ದು. ಅಲ್ಲಿ ಇರತಕ್ಕ ಬೋರ್ಡ್ ಆಫ್ ಡೈರೆಕ್ಟರ್ಸ್ ಏನಿದ್ದಾರೆ, ಅವರು ಕಂಪನಿ ಲಾ ಪ್ರಕಾರ ಕೆಲಸ ಮಾಡುತ್ತಿದ್ದಾರೆ. ಅವರು ಐ.ಎ.ಎಸ್. ಅಧಿಕಾರಿಗಳು ನಿಜ. ಕಂಪನಿ ಸರ್ಕಾರದ್ದಲ್ಲ. ಕೆಲವು ಕಾರಣಗಳಿಂದ ನಮ್ಮ ಅಧಿಕಾರಿಗಳನ್ನು ಛೇರ್ಮನ್‌ಗಳಾಗಿ ಮತ್ತು ಎಂ.ಡಿ.ಗಳಾಗಿ ಇಟ್ಟಿದ್ದೇವೆ. ಶ್ರೀಮಾನ್ ದಾತಾರ್‌ರವರು ಕೂಡ ಹಾಗೇ ಇದ್ದಾರೆ. ಅಧಿಕಾರಿಗಳು ಸರ್ಕಾರಿ ಸೇವೆಯಲ್ಲಿರುತ್ತಾರೆ, ಅವರು ನಿವೃತ್ತಿ ಹೊಂದಿದ ಕೂಡಲೇ ಕಂಪನಿಗಳಿಗೆ ಛೇರ್ಮನ್ ಮಾಡುವುದಕ್ಕೆ ಹೋಗಿಲ್ಲ. ಅಲ್ಲಿ ಶ್ರೀಮಾನ್ ದಾತಾರ್‌ರವರ ಸೇವೆಯನ್ನು ವಿಸ್ತರಿಸಿಕೊಂಡಿದ್ದಾರೆ. ವರ್ಗಾವಣೆ ವಿಷಯದಲ್ಲಿ ಹೇಳುವುದಾದರೆ, ಒಂದೊಂದು ಸಾರಿ ಒಳ್ಳೆಯ ಅಧಿಕಾರಿಗಳನ್ನು ೩-೪ ವರ್ಷಗಳು ಬಿಟ್ಟರೆ, ಅವರು ಅಲ್ಲಿ ನಾಲ್ಕು ವರ್ಷಗಳಿಂದ ಇದ್ದಾರೆಂದು ಇನ್ನು ಮುಂದೆ ನೀವು ಕೇಳಬೇಡಿರಿ. ಇದಕ್ಕೆ ಒಪ್ಪಿಗೆಯೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಉದ್ದಿಮೆಗಳ ವಿಷಯದಲ್ಲಿ ಅಧ್ಯಯನ ನಡೆಸಿಕೊಂಡು ಬರಲು ಹೊರದೇಶಗಳಿಗೆ ಅಧಿಕಾರಿಗಳನ್ನು ಕಳುಹಿಸುತ್ತೀರಿ, ಅಲ್ಲಿಂದ ಬಂದಕೂಡಲೇ ಬೇರೆ ಕಡೆ ವರ್ಗ ಮಾಡುತ್ತೀರಿ, ಅಂಥ ಕೆಲಸ ಮಾಡಬೇಡಿ ಎಂದು ಅವರು ಹೇಳುತ್ತಿದ್ದಾರೆ.

ಸರ್ಕಾರಿ ಸ್ವಾಮ್ಯದ ಭಾರೀ ಪ್ರಮಾಣದ ಕೈಗಾರಿಕೆಗಳು

೬೩. (೫೧೨) ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

೧) ರಾಜ್ಯದಲ್ಲಿರುವ ಸರ್ಕಾರಿ ಸ್ವಾಮ್ಯದ ಭಾರಿ ಕೈಗಾರಿಕೆಗಳ ಒಟ್ಟು ಸಂಖ್ಯೆ ಎಷ್ಟು ?

೨) ಸದರಿ ಕೈಗಾರಿಕೆಗಳಲ್ಲಿ ಲಾಭ ಮತ್ತು ನಷ್ಟದಲ್ಲಿ ನಡೆಯುತ್ತಿರುವ ಕೈಗಾರಿಕೆಗಳೆಷ್ಟು ?

೩) ನಷ್ಟದಲ್ಲಿ ನಡೆಯುತ್ತಿರುವ ಕೈಗಾರಿಕೆಗಳನ್ನು ಲಾಭದಾಯಕವಾಗಿ ಮಾಡಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ, ಕೈಗಾರಿಕೆಗಳ ಮತ್ತು ವಿದ್ಯುತ್ ಸಚಿವರು).—

೧) ಸಾರ್ವಜನಿಕ ಕೈಗಾರಿಕೆಗಳ ೩೦ ಅಸ್ತಿಗಳಲ್ಲಿ ರೂ. ೫ ಕೋಟಿಗಿಂತ ಹೆಚ್ಚಿನ ಹಣ ಹೂಡಿಕೆಯ ಕೈಗಾರಿಕೆಗಳನ್ನು ಭಾರಿ ಕೈಗಾರಿಕೆಗಳೆಂದು ಪರಿಗಣಿಸಲ್ಪಟ್ಟಿಲ್ಲ ಅಂತಹ ೯ ಕೈಗಾರಿಕೆಗಳು ಇವೆ.

೨) ಈ ೯ ಕೈಗಾರಿಕೆಗಳಲ್ಲಿ ೧೯೮೫-೮೬ನೇ ಸಾಲಿನಲ್ಲಿ ೪ ಕೈಗಾರಿಕೆಗಳು ಲಾಭ ಗಳಿಸಿದ್ದು, ೫ ಕೈಗಾರಿಕೆಗಳು ನಷ್ಟ ಹೊಂದಿವೆ.

೩) ಸತತವಾಗಿ ನಷ್ಟದಲ್ಲಿ ನಡೆಯುತ್ತಿರುವ ಕೈಗಾರಿಕೆಗಳ ಬಗ್ಗೆ ಸರ್ಕಾರವು ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಮಹೋದ್ಯಮದ ಮೂಲಕ ಅಧ್ಯಯನಗಳನ್ನು ನಡೆಸಿ ಆಯಾಯ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಕಂಡುಬಂದ ಕುಂದುಕೊರತೆಗಳನುಸಾರವಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಕೈಗಾರಿಕೆಗಳಲ್ಲಿ ಲಾಭ ಗಳಿಸಿರುವ ಕೈಗಾರಿಕೆಗಳು ಯಾವುವು ? ನಷ್ಟ ಹೊಂದಿರುವ ಕೈಗಾರಿಕೆಗಳು ಯಾವುವು ? ನಷ್ಟ ಹೊಂದಿರುವ ಕೈಗಾರಿಕೆಗಳನ್ನು ಸುಧಾರಿಸಲು ಯಾವ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಜೆ. ಹೆಚ್. ಪಟೇಲ್.—ಕೈಗಾರಿಕೆಗಳಲ್ಲಿ ನೇರವಾಗಿ ಕೈಗಾರಿಕೆ ಇಲಾಖೆಗೆ ಸೇರಿದವುಗಳು ಇವೆ. ಬೇರೆ ಮಿನಿಸ್ಟ್ರಿಗೆ ಸೇರಿರತಕ್ಕ ಕೈಗಾರಿಕೆಗಳೂ ಇವೆ. ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್, ಎನ್.ಜಿ.ಇ.ಎಫ್, ಹಟ್ಟಿ ಗೋಲ್ಡ್ ಮೈನ್ಸ್, ಮೈಸೂರು ಲ್ಯಾಂಪ್ಸ್, ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್, ಮೈಸೂರು ಪೇಪರ್ ಮಿಲ್ಸ್, ಮೈಸೂರು ಷುಗರ್ ಕಂಪೆನಿ, ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಮೈಸೂರು ಅಸಿಟೇಟ್ ಕಾರ್ಖಾನೆ. ಇವುಗಳಲ್ಲಿ ಎನ್.ಜಿ.ಇ.ಎಫ್, ಮೈಸೂರು ಲ್ಯಾಂಪ್ಸ್, ಮೈಸೂರು ಅಸಿಟೇಟ್ ಕಾರ್ಖಾನೆ ಈ ವರ್ಷ ಲಾಭ ಮಾಡಿದೆ. ಇನ್ನು ಉಳಿದವುಗಳು ಲಾಭ ಮಾಡಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಷ್ಟ ನಿವಾರಿಸಲು ಏನೇನು ಕ್ರಮಗಳನ್ನು ತೆಗೆದು ಕೊಂಡಿದ್ದೀರಿ ?

ಶ್ರೀ ಜೆ. ಹೆಚ್. ಪಟೇಲ್.—ಆಯಾಯಾ ಉದ್ದಿಮೆಗಳ ವಿಶಿಷ್ಟ ಗುಣದ ಮೇಲೆ ಕ್ರಮ ತೆಗೆದು ಕೊಳ್ಳಬೇಕಾಗಿದೆ. ಮೈಸೂರು ಪೇಪರ್ ಮಿಲ್ಸ್ ಲುಕ್ಸಾನು ಏತಕ್ಕೆ ಆಗುತ್ತಿದೆಯೆಂದರೆ, ಕೇಂದ್ರ ಸರ್ಕಾರ ದವರು ನ್ಯೂಸ್ ಪ್ರಿಂಟ್ ಬೆಲೆಯನ್ನು ಗೊತ್ತುಪಡಿಸುತ್ತಾರೆ. ಅವರು ಫಿಕ್ಸ್ ಮಾಡುವಾಗ ಜಾಸ್ತಿ ಫಿಕ್ಸ್ ಮಾಡಿದರೆ ಲಾಭ ಬರುತ್ತದೆ, ಕಡಿಮೆ ಮಾಡಿದರೆ ನಷ್ಟವಾಗುತ್ತದೆ. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ನಷ್ಟ ಅನುಭವಿಸುವುದಕ್ಕೆ ಇರತಕ್ಕ ಕಾರಣಗಳೇ ಬೇರೆ. ಅಲ್ಲಿರತಕ್ಕ ಯಂತ್ರಗಳನ್ನು ಆಧುನೀಕರಣಗೊಳಿಸಬೇಕು. ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡ ಬೇಕಾಗುತ್ತದೆ. ವಿದ್ಯುತ್ ಒದಗಿಸುವುದಕ್ಕೆ ಹೆಚ್ಚು ಹಣ ತೊಡಗಿಸಬೇಕು. ಆದರ ಮೇಲೆ ಉಕ್ಕಿನ ಬೆಲೆಯನ್ನು ನಿರ್ಧರಿಸತಕ್ಕವರು ನಾವಲ್ಲ. ನಾವು ಈ ವಿಷಯವನ್ನು ಹೇಳಿದರೆ ಆಪಾದನೆಗೋಸ್ಕರ ಹೇಳುತ್ತಾರೆಂದು ದೂಷಣೆ ಮಾಡುತ್ತಾರೆ. ನಾವು ಕಬ್ಬಿಣ ಮತ್ತು ಉಕ್ಕನ್ನು ಉತ್ಪಾದನೆ ಮಾಡುತ್ತಿರುವಾಗ ಕೊರಿಯಾ ಮತ್ತು ಜಪಾನ್‌ನಿಂದ ಉಕ್ಕು ಕಡಿಮೆಗೆ ಸಿಗುತ್ತದೆಂದು ತರಿಸುವುದು ಸಾಧುವಲ್ಲ. ಇದರಿಂದ ಕೂಡ ಲುಕ್ಸಾನು ಆಗುತ್ತದೆ. ಬೊಕಾರೋ ಉಕ್ಕು ಇರಬಹುದು, ನಮ್ಮ ಉಕ್ಕು ಇರಬಹುದು. ಆವುದು ರಫ್ತು ನೀತಿಯಿಂದ ಹೀಗೆ ಹಲವಾರು ಕಾರಣಗಳು ಇವೆ. ಪ್ರತಿಯೊಂದು ಉದ್ಯಮದ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

ವರಾಹಿ ಯೋಜನೆಯಲ್ಲಿ ನಡೆದ ಅವ್ಯವಹಾರ

೬೪ (೧೨) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ವರಾಹಿ ಯೋಜನೆಯಲ್ಲಿ ನಡೆದ ಅವ್ಯವಹಾರದ ಬಗ್ಗೆ ಕಳೆದ ಅಧಿವೇಶನದಲ್ಲಿ ಸದರಿ ಅವ್ಯವಹಾರಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು? (ಅಧಿಕಾರಿಗಳ ಹೆಸರು ಸಂಪೂರ್ಣ ವಿವರ ಒದಗಿಸುವುದು).

ಇ) ಸದರಿ ಅಧಿಕಾರಿಗಳ ಬಗ್ಗೆ ತನಿಖೆ ನಡೆಯುತ್ತಾ ಇದ್ದರೂ ಅವರಿಗೆ ಬಡ್ತಿ ನೀಡಿರುವುದು ನಿಜವಲ್ಲವೇ?

ಶ್ರೀ ಜಿ.ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ನಿಜ.

ಆ) ಸಂಬಂಧಪಟ್ಟ ೬೬ ಅಧಿಕಾರಿಗಳ ಪೈಕಿ ೫೮ ಅಧಿಕಾರಿಗಳ ವಿರುದ್ಧ ವಿಚಾರಣೆಯನ್ನು ಉಪ ಲೋಕಾಯುಕ್ತರವರಿಗೆ ವಹಿಸಲಾಗಿದೆ. ಉಳಿದ ೮ ಅಧಿಕಾರಿಗಳು ಭಾರತೀಯ ಸೇವಾ ಅಧಿಕಾರಿ ಗಳಾಗಿರುವುದರಿಂದ ಭಾರತೀಯ ಸರ್ಕಾರದ ಸೇವೆಯ ನಿಯಮಾವಳಿಯ ಅನ್ವಯ ಕ್ರಮ ತೆಗೆದು ಕೊಳ್ಳಲಾಗಿದೆ. (ಸಂಬಂಧಪಟ್ಟ ಅಧಿಕಾರಿಗಳ ಹೆಸರುಗಳ ಪಟ್ಟಿಯನ್ನು ಲಗತ್ತಿಸಲಾಗಿದೆ).

ಇ) ನಿಜ. ೧೧ ಸಂದರ್ಭಗಳಲ್ಲಿ.